ಬಂದಂತೆ ಎನಿಸಿ ತನ್ನಲ್ಲೇ ತಾನು ಕುಸಿದುಕೊಂಡು ಮಿಸುಕಾಡಿ ಜಡ್ಡುಗಟ್ಟಿದ ಕಪ್ಪಾದಂತ ಮಾಡದಾಗ ಮಳಿ ಹನಿಯಾಗಿ ಸುರುದು ಹಗುರಾದ ಮುಗಿಲಿನಂತೆ ಒಮ್ಮಿ ಹಗುರಾಗಿ ಅಂಗಾತ ಬೀಳುತ್ತಿದ್ಳು. ಪಾರಿ ಮನಸ್ಸಿನ್ಯಾಗ ತನಗೆ ಉಂಟು ಮಾಡಿದ ಬಯಕೆಯನ್ನೊಮ್ಮಿ ಲಚ್ಚಿ ಜತೆ ಸೇರಿಕೊಂಡು ಮಲ್ಲನ ಮುಂದ ಆಸೆಯ ಬುತ್ತಿ ತೆರೆದಿಟ್ಟಳು.

ಹಲ ಹೆಂಗಸ್ರ ತೊಡೆ ತಟ್ಟಿ ರುಚಿ ಕಂಡಿದ್ದ ಮಲ್ಲ ಕಡುಯ್ಯಾಗಿ, ಸಿಟ್ಟಿನಿಂದ ಸೊಕ್ಕಿನವನಾಗಿದ್ದ. ದಿನಕೊಬ್ಬರ ತೊಡಿ ಬಾರಿಸಿ ರುಚಿ ಕಾಣುತ್ತಿದ್ದ. ಪಾರಿ ಮಾತು ಕೇಳಿಗೇಸಿ ಮಲ್ಲ ಅವಳ ಎದುರಿಗೆ ಹಂಗಿಸಿ ಹಂಗಿಸಿ ನಕ್ಕು 'ಏಯ್ ತಿಗಡಿ, ಗಂಡಸಿಗಿ ಮೀಸಿ ಇದ್ದ್ರೇನೆ ಚಂದ ಅಂತ, ಹೆಂಗಸಿಗಿ ಎದಿ ತುಂಬ ಮಲಿ ಇದ್ದ್ರೇನೆ ಚಂದ ಅಂತ ತಿಳ್ಕ' ಎಂದು ಮಿಸ್ಯಾ ತಿರಿಸಿಕೆಂತ ಮಲ್ಲ ಅವಳನ್ನೊಮ್ಮೆ ಮ್ಯಾಲಿಂದ ಕೆಳಗಿನತಕ್ಕ ನೋಡಿ ನಕ್ಕಿದ್ದು, ಅವನಾಡಿದ ಮಾತು ಕೇಳಿ ಎದಿ ಹೊಡೆದು ಮೂರು ಛಿದ್ರವಾಯ್ತು. ಇದಲ್ಲದೇ ವಾರಿಗೇರಗಿ ಸುದ್ದಿ ಮುಟ್ಟಿ ಹೊರಗ ಮಾರಿ ತೊರಸಲಾರದಂಗಾಯ್ತು. ಸಂಕಟ ತಡಿಲಾರದೆ ಪಾರಿ ತನ್ನೆರಡು ಕೈಗಳಿಂದ ಎದಿ ಒತ್ತಿ ಹಿಸುಕಿಕೊಂಡಾಗ ಹಿಡಿದಷ್ಟು ಬರೀ ಕುಬುಸ ಸಿಗುತ್ತಿತ್ತು. ಶಾಪೂರಿನಂತ ಪಟ್ಟಣದಾಗ ಬಂದ ಬಸ್ಸು, ಬ್ರೇಕ್ಕು ಹೊಡೆದಾಗಲೇ ಪಾರಿ ಕುಂತ ಸೀಟಿನಲ್ಲಿ ತಲಿ ಅಲುಗಾಡಿಸಿ ಕಣ್ಣು ಬಿಟ್ಟು ತಲಿ ತೂಗಿದಳು.

ಅವತ್ತು ಶುಕ್ರವಾರದ ಸಂತಿಗಾಗಿ ಬಂದ ಜನರ ಗೌಜು-ಗದ್ದಲದಿಂದ ಪಟ್ಟಣ ತುಂಬಿತ್ತು. ಗೌರವ್ವ ಎದರಿಗೆ ಸಿಕ್ಕ ಸಿಕ್ಕವರನ್ನ ಕೇಳಿಕೊಂಡು, ಓಳು ಮಾಡಿಕೊಂಡು ಹೋಗುತ್ತಿದ್ದವಳನ್ನು ಪಾರಿ ಚಾಚು ತಪ್ಪದೆ ಬೆನ್ನತ್ತುತ್ತಿದ್ದಳು. ಎದಿಗಿ ಬಿಗಿಯಾಗಿ ಎದಿಕಾಣಂಗ ಆಫ್ ತೋಳಿನ ಟೀಶರ್ಟ್ ತೊಟಗಂಡಿದ್ದ ಕಾಲೇಜು

ಹೆಂಗಸರನ್ನು ಕುಂಡಿ ತಿರುಗಿ ನಿಂತು ನೋಡಿ ತಾಯಿ ಬೆನ್ನತ್ತಾಕಿ. ಒಮ್ಮೊಮ್ಮಿ ಖಬರು ತಪ್ಪಿ ನಿಂತು ನೋಡಿ ತಾಯಿ ದನಿ ಮಾಡಿದಾಗಲೇ ಕಾಲು ಕಿತ್ತುತ್ತಿದ್ದಳು. ದೊಡ್ಡದೊಡ್ಡ ಹೊಟೇಲ್‌ಗಳು, ಅಂಗಡಿಗಳು, ಜನರನ್ನ ನೋಡಿಕೊಂಡು ನಿಂತುಕೊಂಡು ಕೊನೆಗೆ ಸರಕಾರಿ ದವಾಖಾನಿ ಅಂಗಳದಾಗ ತಾಯಿ ಮಗಳು ಹೆಜ್ಜಿ ಇಟ್ಟರು. ದವಾಖಾನಿ ಕಂಡ ಪಾರಿ ತನ್ನಲ್ಲಿ ದಿಗಿಲು, ಎದ್ಯಾಗ ಏರಿಳಿತದ ಭಾವನೇ, ಅಂಜಿಕೆ ಒಟ್ಟೊಟ್ಟಿಗೆ ಮೂಡಕತ್ತಿದ್ವು. ಮುಂದ ಹೊಂಟ ಗೌರವ್ವನನ್ನು ನೋಡಿದಕಿನೇ ಉಗುಳು ನುಂಗಿಕೊಂಡು ತಣ್ಣಗೆ ಹಿಂದಕ್ಕಾದಳು.

ಒಮ್ಮೊಮ್ಮೆ ಕಕ್ಕಾಬಿಕ್ಕಿಯಾಗಿ ದಿಗಿಲುಗೊಂಡು ಕಣ್ಣು

